ಹಿರೇಗುಡ್ಡದಲ್ಲಿ ಮೂರು ಮೊಲೆಯುಳ್ಳ ದೇವಿ ಅವತಾರ ಎತ್ತಿರುವ ಸುದ್ದಿ ನಾಡ ತುಂಬೆಲ್ಲ ಸಂಚಲನ ಸೃಷ್ಟಿಸಿತು. ದೇವಿಯನ್ನು ನೋಡಲು ಭಕ್ತರು ದಂಡೋಪದಂಡವಾಗಿ ಬರತೊಡಗಿದರು.

‘ಆ ದೇವಿ ಮೊದಲು ಕಂಡದ್ದು ದಲಿತರ ಹುಡುಗಿಗೆ, ಆ ದೇವಿಯ ಪೂಜೆ ಮಾಡಿದ್ದು ಅದೇ ಹುಡುಗಿ. ಹಿಂಗಾಗಿ ಆ ದೇವಿ ಕೂಡಾ ದಲಿತ ದೇವಿಯೇ’ ಎಂದು ಊರ ಜನರ ಮುಂದೆ ಪಾಟೀಲರು ಮಾತಾಡುತ್ತಾ, ಮಡಿವಂತರು, ಮೇಲ್ಜಾತಿಯವರು ಆ ಕಡೆ ಹೋಗದಂತೆ ಕಿವಿ ಊದಿ ತಮ್ಮ ಹಿರಿಮೆ- ಗರಿಮೆ ಹೆಚ್ಚಿಸಿಕೊಂಡರು.

ಹಿಂದಿನ ಕಾಲದಲ್ಲಿ ನಮ್ಮ ಪೂರ್ವಜರು ಕಳ್ಳಕಾಕರ ಕೈಗೆ ಸಿಗದಂತೆ, ದರೋಡೆಕೋರರ ಕಣ್ಣಿಗೆ ಕಾಣದಂತೆ ಬೆಳ್ಳಿ, ಬಂಗಾರ, ನಾಣ್ಯಗಳನ್ನು ಕಾಡಿನಲ್ಲೋ, ಬೆಟ್ಟ ಗುಡ್ಡದಲ್ಲೋ ಹೂತಿಟ್ಟು ತಮ್ಮ ಕೂನಕ್ಕಾಗಿ ದೇವರ ಮೂರ್ತಿಯನ್ನು ಇಟ್ಟು, ತಮಗೆ ಬೇಕಾದಾಗ ಆ ನಿಧಿಯನ್ನು ಪುನಃ ತೆಗೆದುಕೊಳ್ಳುತ್ತಿದ್ದರು. ನಮ್ಮೂರ ಗುಡ್ಡದಲ್ಲಿರುವ ಆ ದೇವಿಯ ಕೆಳಗೆ ಯಾಕೆ ನಿಧಿ ಇದ್ದಿರಬಾರದು ಎಂದು ಕವಡಿ ಈರಯ್ಯ, ಪಾಟೀಲರ ಕಿವಿಯಲ್ಲಿ ಹುಳ ಬಿಟ್ಟನು. ಕವಡಿ ಈರಯ್ಯ ಹೇಳಿದಂತೆ ಆ ಗುಡ್ಡದಲ್ಲಿರುವ ದೇವಿಯ ಬುಡದಲ್ಲಿ ಖಂಡಿತಾ ನಿಧಿ ಇದ್ದೇ ಇದೆ ಎಂದು ನಂಬಿ, ಅದನ್ನು ಅಗೆಯುವ ದಾರಿ ಹುಡುಕಲು ಪಾಟೀಲರು ಮನದಲ್ಲಿ ಅಕಲು ಹಾಕತೊಡಗಿದನು.

ಬರಬರುತ್ತಾ ದೇವಿಯ ಲೀಲೆ ಬೆಳೆಯತೊಡಗಿತು. ಪದ್ದಕ್ಕ ಮತ್ತು ನಾನು ಎಮ್ಮೆಯ ಉಸಾಬರಿ ಬಿಟ್ಟು, ಇಬ್ಬರೂ ದಿನವೂ ದೇವಿಯ ಪೂಜೆ ಪುನಸ್ಕಾರದಲ್ಲಿ ತೊಡಗಿದೆವು. ದೇವಿ ನೋಡಲು ಬಂದ ಭಕ್ತರು ದೇವಿಯ ಮುಂದೆ ನೂರು, ಹತ್ತು, ಐವತ್ತು, ಚಿಲ್ಲರೆ ಹಣವನ್ನು ಇಟ್ಟು ಹೋಗುತ್ತಿದ್ದರು. ಪದ್ದಕ್ಕ ಭಕ್ತರು ಕೊಟ್ಟ ದುಡ್ಡನ್ನೇ ಕೂಡಿಸಿಟ್ಟು ದೇವಿಗೊಂದು ಗುಡಿ ಕಟ್ಟಿ ನೆರಳು ಮಾಡಬೇಕೆಂದು ದಿನವೂ ಕನಸು ಕಾಣುತ್ತಿದ್ದಳು.

ದೇವಪುರದ ಮೇಲ್ಜಾತಿ ಜನರನ್ನು ಹೊರತು ಪಡಿಸಿ ಸುತ್ತಮುತ್ತಲಿನ ಊರಿನ ಭಕ್ತರೆಲ್ಲ ದೇವಿಗೆ ಬಂದು ದರುಶನ ಪಡೆದು ತಮ್ಮ ಹರಕೆ, ಕೋರಿಕೆ ಈಡೇರಿಸುವಂತೆ ದೇವಿಯ ಮುಂದೆ ಕೈಮುಗಿದು ಬೇಡಿಕೊಂಡು ಹೋಗುತ್ತಿದ್ದರು.

ಪಾಟೀಲರಿಗೆ ನಿಧಿ ಎಬ್ಬಿಸುವ ಚಿಂತೆ ನಿತ್ಯವೂ ಕಾಡತೊಡಗಿತು. ಬೇರೆ ಜಿಲ್ಲೆಯಿಂದ ಎಂಟ್ಹತ್ತು ಹುಡುಗರನ್ನು ಕರೆಸಿಕೊಂಡು, ಹಗಲು ಹೊತ್ತು ಆ ಗುಡ್ಡದ ಹಾದಿಯಲ್ಲಿ ಅವರನ್ನು ಕಳಿಸಿ, ದೇವಿಯ ದರುಶನ ಪಡೆಯುವ ನೆಪದಲ್ಲಿ ಜಾಗ ಪತ್ತೆ ಮಾಡಿಸಿ, ಪಾಟೀಲರು ತಾವು ನಿರಾಳಗೊಂಡರು.

ಬೇರೆ ಜಿಲ್ಲೆಯಿಂದ ಬಂದ ಪುಂಡರ ದಂಡು ರಾತ್ರಿ ಗುಡ್ಡ ಏರಿದರು. ಗುದ್ದಲಿ, ಸಲಕಿ, ಹಾರಿ, ಬುಟ್ಟಿ ಸಮೇತ ಸಜ್ಜಾಗಿಯೇ ದೇವಿ ಇರುವ ಜಾಗಕ್ಕೆ ಬಂದು ತಲುಪಿದರು. ಪಾಟೀಲರು ನಿಧಿಯಲ್ಲಿ ನಿಮಗೂ ಕವಡಿ ಈರಯ್ಯನಿಗೂ ಅರ್ಧ ಭಾಗ, ನನಗರ್ಧ ಭಾಗ ಎಂದು ಕರಾರು ಮಾಡಿದ್ದನ್ನು ಆ ಪುಂಡರು ನೆನಪಿಸಿಕೊಂಡು. ಅವಸರವಸರವಾಗಿ ಭೂಮಿ ಅಗೆಯಲು ಸಜ್ಜಾದರು. ದೇವಿಯ ಸುತ್ತಲೂ ಗುದ್ದಲಿ ಹಾಕಿ, ದೇವಿಯನ್ನು ಮೇಲೆಬ್ಬಿಸಿದರು. ಅದರಲ್ಲೊಬ್ಬ ಆ ದೇವಿಯನ್ನು ಪಕ್ಕದಲ್ಲಿರುವ ಒಂದು ಮಸ್ವಾಳ ಕಂಟಿಯ ಬುಡಕ್ಕೆ ನೀಟಾಗಿ ಇಟ್ಟು ನಮಸ್ಕರಿಸಿದ್ದ. ಎಲ್ಲರೂ ನೆಲ ಬಗೆಯತೊಡಗಿದರು. ಎಷ್ಟು ಬಗೆದರೂ ಒಂದು ಕಬ್ಬಿಣ ಚೂರವೂ ಅವರ ಕಣ್ಣಿಗೆ ಕಾಣಲಿಲ್ಲ, ಕೈಗೆ ತಾಗಲಿಲ್ಲ. ಬೆಳಕಾಗುವ ಹೊತ್ತಿಗೆ ನೆಲವಗೆದು ಎರಡಾಳು ಆಳತಿಯ ದೊಡ್ಡ ಹುಂಡಿಯೇ ಮಾಡಿದ್ದರು. ಏನೂ ಸಿಗದೇ ಕಂಗಾಲಾಗಿ, ಸಾಕಾಗಿ ಗುದ್ದಲಿ ಸಲಕಿ ದೂರದಲ್ಲೊಂದು ಕಂಟಿಯಲ್ಲಿ ಬಿಸಾಕಿ ಪಾಟೀಲರನ್ನು ಕವಡಿ ಈರಯ್ಯನ್ನು ಬೈಯ್ಯುತ್ತಾ ಪುಂಡರು ತಮ್ಮೂರ ಹಾದಿ ಹಿಡಿದಿದ್ದರು.

